ಓ.ಎಸ್. ನಂ. 175/2017

ಪಿ.ಡಬ್ಲ್ಯು 01

ದಿನಾಂಕಃ 05-03-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ 02 ನೇ ಪ್ರತಿವಾದಿ ಪರ – ಶ್ರೀ ಟಿ.ಎಂ.ಎಸ್. ವಕೀಲರಿಂದ.

01 ನೇ ಪ್ರತಿವಾದಿಯ ತಂದೆಯ ಹೆಸರು ಚೆನ್ನಬಸಪ್ಪ. 01 ನೇ ಪ್ರತಿವಾದಿಯ ತಂದೆ ಚೆನ್ನಬಸಪ್ಪ ಇವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೇ ಹೆಂಡತಿ ಕೊಟ್ರಮ್ಮ ಮತ್ತು ಎರಡನೇ ಹೆಂಡತಿ ಸಂಗನಬಸಮ್ಮ ಎಂದರೆ ಸರಿ. ಚೆನ್ನಬಸಪ್ಪ ಮತ್ತು ಕೊಟ್ರಮ್ಮ ಇವರಿಗೆ ಸಣ್ಣ ವೀರಪ್ಪ ಎಂಬ ಒಬ್ಬನೇ ಮಗ. ಚೆನ್ನಬಸಪ್ಪ ಮತ್ತು ಸಂಗನಬಸಮ್ಮ ಇವರಿಗೆ ವೀರಪ್ಪ ಎಂಬ ಒಬ್ಬನೇ ಮಗ.

ಚೆನ್ನಬಸಪ್ಪ ಮತ್ತು ಕೊಟ್ರಮ್ಮ ಇವರ ಮಗನನ್ನು ಜಿಡ್ಡಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಮಧ್ಯದಲ್ಲಿ ಹಾಗೇ ಕರೆಯುತ್ತಿದ್ದಾರೆ ಎಂದು ನುಡಿಯುತ್ತಾರೆ. ಅಂದಾಜು 60 ವರ್ಷಗಳಿಂದ ಚೆನ್ನಬಸಪ್ಪ ಮತ್ತು ಕೊಟ್ರಮ್ಮ ಇವರ ಮಗನನ್ನು ಜಿಡ್ಡಪ್ಪ ಎಂದು ಕರೆಯುತ್ತಿದ್ದಾರೆ.

ಚೆನ್ನಬಸಪ್ಪ ಮತ್ತು ಕೊಟ್ರಮ್ಮ ಇವರ ಮಗನನ್ನು ಸಣ್ಣ ವೀರಪ್ಪ ಎಂದು ಕರೆಯದೇ, ಕೇವಲ ವೀರಪ್ಪ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ. ಚೆನ್ನಬಸಪ್ಪ ಮತ್ತು ಸಂಗನಬಸಮ್ಮ ಇವರ ಮಗನ ಹೆಸರು ವೀರಪ್ಪ ಇದ್ದು, ಅವರನ್ನು ಸಣ್ಣ ವೀರಪ್ಪ ಎಂದು ಸಹ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಚೆನ್ನಬಸಪ್ಪ ಮತ್ತು ಕೊಟ್ರಮ್ಮ ಇವರ ಮಗನೇ ವಯಸ್ಸಿನಲ್ಲಿ ಚೆನ್ನಬಸಪ್ಪ ಮತ್ತು ಸಂಗನಬಸಮ್ಮ ಇವರ ಮಗನಿಗಿಂತ ದೊಡ್ಡವನು ಎಂದರೆ ಸರಿ. ಚೆನ್ನಬಸಪ್ಪರವರ ಇಬ್ಬರ ಹೆಂಡತಿಯರಿಂದ ಇದ್ದ ಇಬ್ಬರು ಮಕ್ಕಳ ಹೆಸರು ವೀರಪ್ಪ ಇದ್ದ ಕಾರಣ, ಚೆನ್ನಬಸಪ್ಪ ಮತ್ತು ಕೊಟ್ರಮ್ಮ ಇವರ ಮಗ ವಯಸ್ಸಿನಲ್ಲಿ ದೊಡ್ಡವನಿದ್ದ ಕಾರಣ, ಆತನನ್ನು ವೀರಪ್ಪ ಎಂದು ಮತ್ತು ಚೆನ್ನಬಸಪ್ಪ ಮತ್ತು ಸಂಗನಬಸಮ್ಮ ಇವರ ಮಗ ವೀರಪ್ಪ ವಯಸ್ಸಿನಲ್ಲಿ ಚಿಕ್ಕವನಿದ್ದ ಕಾರಣ, ಆತನನ್ನು ಸಣ್ಣ ವೀರಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ.

ಚೆನ್ನಬಸಪ್ಪರವರ ಇಬ್ಬರು ಮಕ್ಕಳು ಯಾವಾಗ ಪಾಲು-ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿರವರ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ.

ದಾವಾ ಆಸ್ತಿಯ ಸರ್ವೆ ನಂ. 798/ಎಫ್ ಮತ್ತು ಅದರ ವಿಸ್ತೀರ್ಣಃ 02 ಎಕರೆ 38 ಸೆಂಟ್ಸ್ ಇರುತ್ತದೆ. ದಾವಾ ಆಸ್ತಿಯನ್ನು ನನ್ನ ತಾಯಿ ಗೌರಮ್ಮ 2013 ರಲ್ಲಿ ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರ ಮತ್ತು ಖರೀದಿ ಪತ್ರದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಯಾವ ದಾಖಲಾತಿಗಳನ್ನು ನೋಡಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೀರಿ? ಎಂದರೆ ಸಾಕ್ಷಿಯು ಪಹಣಿ ಪತ್ರಿಕೆಗಳನ್ನು ನೋಡಿ ಖರೀದಿ ಮಾಡಿರುವುದಾಗಿ ನುಡಿಯುತ್ತಾರೆ. ಖರೀದಿ ಮಾಡುವ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳಲ್ಲಿ ಸಣ್ಣ ವೀರಪ್ಪ ಇವರ ಹೆಸರು ನಮೂದು ಇತ್ತು. ಸದರಿ ಪಹಣಿ ಪತ್ರಿಕೆಗಳಲ್ಲಿ ಸಣ್ಣ ವೀರಪ್ಪ ಇವರ ಹೆಸರು ಯಾವ ಆಧಾರದ ಮೇಲೆ ನಮೂದು ಆಗಿತ್ತು ಎಂದರೆ ಸಾಕ್ಷಿಯು ಸಣ್ಣ ವೀರಪ್ಪ ಮತ್ತು ಅವರ ಸಹೋದರರ ನಡುವೆ ಆದ ಪಾಲು-ವಿಭಾಗದ ಆಧಾರದ ಮೇಲೆ ಸಣ್ಣ ವೀರಪ್ಪ ಇವರ ಹೆಸರು ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಾಲು-ವಿಭಾಗ ಯಾರ-ಯಾರ ನಡುವೆ ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಪಾಲು-ವಿಭಾಗ ಚೆನ್ನಬಸಪ್ಪ, ಕೊಟ್ರಮ್ಮ ಇವರ ಮಗ ಮತ್ತು ಚೆನ್ನಬಸಪ್ಪ, ಸಂಗನಬಸಮ್ಮ ಇವರ ಮಗನ ನಡುವೆ ಆಗಿರುತ್ತದೆ. ಸದರಿ ಪಾಲು-ವಿಭಾಗ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಪಾಲು-ವಿಭಾಗದ ಆಧಾರದ ಮೇಲೆ ಆದ ಹಕ್ಕು-ಬದಲಾವಣೆ ಆದೇಶವನ್ನು ನೋಡಿರುತ್ತೇನೆ.

ಸಾಕ್ಷಿಗೆ ದಾಖಲೆಯೊಂದನ್ನು ತೋರಿಸಲಾಗಿ, ಸದರಿ ದಾಖಲೆಯೇ ಈ ಮೇಲೆ ಹೇಳಿದ ಹಕ್ಕು-ಬದಲಾವಣೆ ಆದೇಶ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿದಿದ್ದರಿಂದ, ಸದರಿ ದಾಖಲೆಯನ್ನು ನಿಡಿಃ 01 ಎಂದು ಗುರುತಿಸಲಾಯಿತು. ನಿಡಿಃ 01 ದಾಖಲೆಯ ಪ್ರಕಾರ ದಾವಾ ಆಸ್ತಿಯು ಚೆನ್ನಬಸಪ್ಪ ಮತ್ತು ಸಂಗನಬಸಮ್ಮ ಇವರ ಮಗನಾದ ಸಣ್ಣ ವೀರಪ್ಪ ಇವರ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಪಾಲು-ವಿಭಾಗ ಆದಾಗಿನಿಂದ ದಾವಾ ಆಸ್ತಿಯಲ್ಲಿ ಚೆನ್ನಬಸಪ್ಪ ಮತ್ತು ಸಂಗನಬಸಮ್ಮ ಇವರ ಮಗನಾದ ವೀರಪ್ಪ ಅಲಿಯಾಸ್ ಸಣ್ಣ ವೀರಪ್ಪ ಇವರೇ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ.

ಚೆನ್ನಬಸಪ್ಪ ಮತ್ತು ಕೊಟ್ರಮ್ಮ ಇವರ ಮಗನಾದ ವೀರಪ್ಪ ಅಲಿಯಾಸ್ ಜಿಡ್ಡಪ್ಪ ಎಂದಿಗೂ ಸಹ ದಾವಾ ಆಸ್ತಿಯ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡುವ ಕಾಲಕ್ಕೆ ದಾವಾ ಆಸ್ತಿಗೆ ಸಂಬಂಧಿಸಿದ ಋಣಭಾರ ಪ್ರಮಾಣ ಪತ್ರವನ್ನು ತೆಗೆಸಿದ್ದೀರಾ? ಎಂದರೆ ಸಾಕ್ಷಿಯು ತೆಗೆಸಿದ್ದೆವು ಎಂದು ನುಡಿಯುತ್ತಾರೆ. ಸದರಿ ಋಣಭಾರ ಪ್ರಮಾಣ ಪತ್ರ ನನ್ನ ಬಳಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು, ಮನೆಯಲ್ಲಿ ಇದೆ ಎಂದು ನುಡಿಯುತ್ತಾರೆ. ಸದರಿ ಋಣಭಾರ ಪ್ರಮಾಣ ಪತ್ರದಲ್ಲಿ ಯಾವುದೇ ವ್ಯವಹಾರಗಳ ಬಗ್ಗೆ ನಮೂದು ಇರಲಿಲ್ಲ.

ಓ.ಎಸ್. ನಂ. 175/2017
ಪಿ.ಡಬ್ಲ್ಯೂ 01

ದಿನಾಂಕಃ 05-06-2012 ರಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ 01 ನೇ ಪ್ರತಿವಾದಿಯು 02 ನೇ ಪ್ರತಿವಾದಿಯ ಪರವಾಗಿ ನೋಂದಾಯಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ದಾಖಲೆಯ ಬಗ್ಗೆ ನನಗೆ ಮತ್ತು ನನ್ನ ತಾಯಿಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದ ಆಧಾರದ ಮೇಲೆ 02 ನೇ ಪ್ರತಿವಾದಿಯು 01 ನೇ ಪ್ರತಿವಾದಿಯ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯು 02 ನೇ ಪ್ರತಿವಾದಿಯ ಪರವಾಗಿ ಡಿಕ್ರಿ ಆಗಿರುತ್ತದೆ ಎಂದರೆ ಸರಿ. ತದನಂತರ, ಸದರಿ ಕರಾರು ಪತ್ರದ ಆಧಾರದ ಮೇಲೆ 02 ನೇ ಪ್ರತಿವಾದಿಯು ತನ್ನ ಪರವಾಗಿ ಕ್ರಯ ಪತ್ರವನ್ನು ಬರೆದುಕೊಡಬೇಕೆಂದು ಮತ್ತೊಂದು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ದಿನಾಂಕಃ 06-05-2017 ರಂದು 02 ನೇ ಪ್ರತಿವಾದಿಯು ಮಾನ್ಯ ನ್ಯಾಯಾಲಯದ ಮುಖಾಂತರ ದಾವಾ ಆಸ್ತಿಗೆ ಸಂಬಂಧಿಸಿದಂತೆ ತಮ್ಮ ಪರವಾಗಿ ಕ್ರಯ ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸರಿ. ತದನಂತರ, 02 ನೇ ಪ್ರತಿವಾದಿಯು ಮಾನ್ಯ ನ್ಯಾಯಾಲಯದ ಮುಖಾಂತರ ದಾವಾ ಆಸ್ತಿಯ ಸ್ವಾಧೀನತೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ದಿನದಿಂದ 02 ನೇ ಪ್ರತಿವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ತಾನು ಸ್ವಾಧೀನದಲ್ಲಿರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿಯ ಸ್ವಾಧೀನದಲ್ಲಿ 02 ನೇ ಪ್ರತಿವಾದಿಯೇ ಇದ್ದರೂ ಸಹ ನಾನು ಸ್ವಾಧೀನದಲ್ಲಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮಾನ್ಯ ನ್ಯಾಯಾಲಯದಿಂದ 02 ನೇ ಪ್ರತಿವಾದಿಯು ಕ್ರಯ ಪತ್ರ ಬರೆಸಿಕೊಂಡ ನಂತರ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳಲ್ಲಿ 02 ನೇ ಪ್ರತಿವಾದಿಯು ತನ್ನ ಹೆಸರನ್ನು ನಮೂದು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ.

ದಾವಾ ಆಸ್ತಿಯನ್ನು ನಿಪಿಃ 01 ರ ಮೂಲಕ ಮಾರಾಟ ಮಾಡಿದ ಮಾರಾಟಗಾರನಿಗೆ ದಾವಾ ಆಸ್ತಿಯ ಮೇಲೆ ಯಾವುದೇ ರೀತಿಯ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಚೆನ್ನಬಸಪ್ಪ ಇವರ ಇಬ್ಬರೂ ಮಕ್ಕಳ ಹೆಸರು ವೀರಪ್ಪ ಇದ್ದ ಕಾರಣ, ಸದರಿ ಹೆಸರನ್ನು ದುರುಪಯೋಗ ಪಡಿಸಿಕೊಂಡು 01 ನೇ ಪ್ರತಿವಾದಿಗೆ ಸೇರಿದ ಆಸ್ತಿಯನ್ನು ನನ್ನ ತಾಯಿ ಅಕ್ರಮವಾಗಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದ ಆಧಾರದ ಮೇಲೆ ನನ್ನ ತಾಯಿಗಾಗಲೀ, ನನಗಾಗಲೀ ಯಾವುದೇ ಹಕ್ಕು ಪ್ರಾಪ್ತಿಯಾಗುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿ 01 ನೇ ವಾದಿ ಈಗ ಆರೋಗ್ಯವಾಗಿದ್ದಾರೆ. ದಾವಾ ಆಸ್ತಿಯನ್ನು ನನ್ನ ತಾಯಿಗೆ ಮಾರಾಟ ಮಾಡಿದ ವ್ಯಕ್ತಿ ಈಗ ನಿಧನ ಹೊಂದಿರುತ್ತಾರೆ. ಸದರಿ ವ್ಯಕ್ತಿ ಯಾವಾಗ ನಿಧನ ಹೊಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ವ್ಯಕ್ತಿಗೆ ಹೆಂಡತಿ ಮತ್ತು ಮಕ್ಕಳು ಇದ್ದಾರೆ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ರೀತಿಯ ಕಾನೂನುಬದ್ಧ ಹಕ್ಕು ಇಲ್ಲ ಎಂದರೆ ಸರಿಯಲ್ಲ. 02 ನೇ ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕರು ಎಂದರೆ ಸರಿಯಲ್ಲ. 02 ನೇ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

01 ನೇ ಪ್ರತಿವಾದಿ ಪರ ವಕೀಲರು 02 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.